ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯ ಕಲಬುರಗಿ

ಸಂಖ್ಯೆ:-ಜಿ1:ಖಾಪ್ರಾಶಾ:ಹೊ.ಶಾ.ಅನು ತಿದ್ದುಪಡಿ:192:2015-16 3763 ದಿನಾಂಕ: 12-10-2017

## -:ಜ್ಞಾಪನ:-

**ವಿಷಯ:-** ಶ್ರೀ ದಾಮೋದರ ರಘೋಜಿ ಪ್ರೈವೇಟ್ ಟ್ರಸ್ಟ (ರಿ),ಕಲಬುರಗಿ ಅವರ ಅಡಿಯಲ್ಲಿ ನಡೆಯುತ್ತಿರುವ ಶ್ರೀ ದಾಮೋದರ ರಘೋಜಿ ಸ್ಮಾರಕ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ, ಟಿ.ವ್ಹಿ ಸ್ಟೇಶನ್ ಹಿಂದುಗಡೆ, ಕಲಬುರಗಿ ಈ ಶಾಲೆಯನ್ನು 2016-17 ನೇಸಾಲಿನಿಂದ ತರಗತಿ 1 ರಿಂದ 5 ವರೆಗೆ ಎಕಕಾಲಕ್ಕೆ ಪ್ರಾರಂಭಿಸಲು ಅನುಮತಿ ನೀಡುವ ಕುರಿತು.

**ಉಲ್ಲೇಖ:-** 1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ನ್ಯಾಯಾಲಯ (ಪ್ರಾಥಮಿಕ ಮತ್ತು ಪ್ರೌಢ) ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ರಿವಿಷನ್ ಪಿಟಿಷನ್ ಅರ್ಜಿ ಸಂಖ್ಯೆ: 43/2016 (ಇಡಿ 370 ಪಿಜಿಸಿ 2017) ಆದೇಶ ದಿನಾಂಕ: 30-06-2017

2. ಈ ಕಚೇರಿಯ ಅನುಮತಿ ಅದೇಶ ಪತ್ರ ಸಂಖ್ಯೆ:ಜಿ1(1):ಖಾಪ್ರಾಶಾ:ಹೊ.ಶಾ.:ಅನು:192/2015-16 ದಿನಾಂಕ:13-04-2016.

**ಪ್ರಸ್ತಾವನೆ ;-**

ಶ್ರೀ ದಾಮೋದರ ರಘೋಜಿ ಪ್ರೈವೇಟ್ ಟ್ರಸ್ಟ (ರಿ),ಹುಮನಾಬಾದ ರಿಂಗ ರೋಡ್, ಕಲಬುರಗಿ ಅವರ ಅಡಿಯಲ್ಲಿ ನಡೆಯುತ್ತಿರುವ ಶ್ರೀ ದಾಮೋದರ ರಘೋಜಿ ಸ್ಮಾರಕ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ, ಟಿ.ವ್ಹಿ, ಸ್ಟೇಶನ್ ಹಿಂದುಗಡೆ, ಕಲಬುರಗಿ, ಈ ಶಾಲೆಯನ್ನು 2016-17 ರಿಂದ ಹೊಸದಾಗಿ ಪ್ರಾರಂಭಿಸಲು ಅನುಮತಿಯನ್ನು ಉಲ್ಲೇಖಿತ ಪತ್ರ (2) ರನ್ವಯ 2016-17 ನೇ ಸಾಲಿಗಾಗಿ. 1 ನೇ ತರಗತಿ.2017-18 2ನೇ ತರಗತಿ, 2018-19 3ನೇ ತರಗತಿ, 2019-20 4ನೇ ತರಗತಿ, 2020-21 5ನೇ ತರಗತಿ ಈ ರೀತಿಯಾಗಿ ಪ್ರಾರಂಭಿಸಲು ಅನುಮತಿ ನೀಡಲಾಗಿತ್ತು. ಆದರೆ ಸದರಿ ಆಡಳಿತ ಮಂಡಳಿಯವರು ಶಾಲೆಯನ್ನು ತರಗತಿ 1 ರಿಂದ 5 ಎಕಕಾಲಕ್ಕೆ ಪ್ರಾರಂಭಿಸಲು ಅನುಮತಿಗಾಗಿ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಅಧಿನಿಯಮ 131 ರಡಿ ಮೇಲ್ಮನವಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ನ್ಯಾಯಾಲಯ (ಪ್ರಾಥಮಿಕ ಮತ್ತು ಪ್ರೌಢ) ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ಅವರಿಗೆ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ವಿಚಾರಣೆಯಲ್ಲಿ ಮಾನ್ಯ ಮೇಲ್ಮನವಿ ಪ್ರಾಧಿಕಾರಿ ಹಾಗೂ ಸರಕಾರದ ಉಪ ಕಾರ್ಯದರ್ಶಿ(ಸೇವೆಗಳು),ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ),ಬೆಂಗಳೂರು.ಅವರು ಸರಕಾರದ ಅಧಿಸೂಚನೆ ಸಂಖ್ಯೆ:ಇಡಿ 23 ವಿವಿಧ 2009, ದಿನಾಂಕ: 15-05-2009 ಹಾಗೂ ದಿನಾಂಕ: 22-05-2009 ಆದೇಶಗಳನ್ನು ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಸದರಿ ಶಾಲೆಗೆ 2017-18 ನೇ ಶೈಕ್ಷಕಣಿಕ ವರ್ಷದಿಂದಲೇ ಈ ಕಚೇರಯ ಅನುಮತಿ ಆದೇಶ ಉಲ್ಲೇಖ (2)ನ್ನು ಮಾರ್ಪಡಿಸಿ 1 ರಿಂದ 5 ನೇ ತರಗತಿಗಳನ್ನು ಆಂಗ್ಲ ಮಾಧ್ಯಮದಲ್ಲಿ ಏಕಕಾಲದಲ್ಲಿ ಅನುದಾನರಹಿತವಾಗಿ ಪ್ರಾರಂಭಿಸಲು ಉಲ್ಲೇಖಿತ ಪತ್ರ (1) ರನ್ವಯ ಅನುಮತಿ ನೀಡಿರುತ್ತಾರೆ. ಅದರಂತೆ ಈ ತಿದ್ದುಪಡಿ ಆದೇಶ.

## ಆದೇಶ:-

ಈ ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಶ್ರೀ ದಾಮೋದರ ರಘೋಜಿ ಪ್ರೈವೇಟ್ ಟ್ರಸ್ಟ (ರಿ),ಹುಮನಾಬಾದ ರಿಂಗ ರೋಡ್ ಕಲಬುರಗಿ ಅವರ ಅಡಿಯಲ್ಲಿ ನಡೆಯುತ್ತಿರುವ ಶ್ರೀ ದಾಮೋದರ ರಘೋಜಿ ಸ್ಮಾರಕ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ, ಟಿ.ವ್ಹಿ ಸ್ಟೇಶನ್ ಹಿಂದುಗಡೆ, ಕಲಬುರಗಿ, ಈ ಶಾಲೆಯನ್ನು 2016-17 ನೇ ಸಾಲಿನಿಂದ 1 ರಿಂದ 5 ನೇ ತರಗತಿ ಆಂಗ್ಲ ಮಾಧ್ಯಮದಲ್ಲಿ ಶಾಶ್ವತ ಅನುದಾನರಹಿತವಾಗಿ ಪ್ರಾರಂಭಿಸಲು ಉಲ್ಲೇಖ(2) ರ ಅನುಮತಿ ಆದೇಶವನ್ನು ಮಾರ್ಪಡಿಸಿ ಸರಕಾರದ ಆದೇಶ ಉಲ್ಲೇಖ (1) ರನ್ವಯ 1 ರಿಂ 5 ನೇ ತರಗತಿಯನ್ನು 2017-18 ನೇ ಸಾಲಿನಿಂದ ಏಕಕಾಲಕ್ಕೆ ಪ್ರಾರಂಭಿಸಲು ಅನುಮತಿ ನೀಡಿದೆ.

**ಗೆ,**

ಟ್ರಸ್ಟಿ/ಅಧ್ಯಕ್ಷರು,
ಶ್ರೀ ದಾಮೋದರ ರಘೋಜಿ ಪ್ರೈವೇಟ್ ಟ್ರಸ್ಟ,
ಹುಮನಾಬಾದ ರಿಂಗ ರೋಡ್,ಕಲಬುರಗಿ.

ಉಪ ನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಕಲಬುರಗಿ.

**ಪ್ರತಿಯನ್ನು:-**ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ನ್ಯಾಯಾಲಯ (ಪ್ರಾಥಮಿಕ ಮತ್ತು ಪ್ರೌಢ) ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ಅವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.

# ಉಪನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಜಿಲ್ಲೆ ಕಲಬುರಗಿ

ಸಂಖ್ಯೆ: ಜಿ1/ಖಾಪ್ರಾಶಾ/ಹೊಪ್ರಾಶಾ/ಅನು/192/2015-16 ದಿನಾಂಕ:13-04-2016

**ನಮೂನೆ-2**

**ಶ್ರೀ ದಾಮೋದರ ರಘೋಜಿ ಪ್ರೈವೇಟ್ ಟ್ರಸ್ಟ್ ಹುಮನಾಬಾದ ರಿಂಗ ರೋಡ ಕಲಬುರಗಿ** ಇವರ ಗವರನಿಂಗ ಕೌನ್ಸಿಲನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ 1-1995 ಸೆಕ್ಷನ್ 31 ರಲ್ಲಿದ್ದಂತೆ) ಈ ದಿನಾಂಕ:13-04-2016 ರಂದು ಕೆಳಗೆ ನಮೂದಿಸಿದ ಶಿಕ್ಷಣ ಸಂಸ್ಥೆಯನ್ನು ನೊಂದಾಯಿಸಲಾಗಿದೆ ಎಂದು ಪ್ರಮಾಣಿಕರಿಸಲಾಗಿದೆ.

| | | |
|---|---|---|
| 1 | **ಶಾಲಾ ಅನುಮತಿ ಸಂಖ್ಯೆ:** | **12/2016** |
| 2 | **ಪ್ರಾಥಮಿಕ ಶಾಲೆಯ ಹೆಸರು ಮತ್ತು ಅನುಮತಿಸಿದ ಸ್ಥಳ** | **ಶ್ರೀ ದಾಮೋದರ ರಘೋಜಿ ಸ್ಮಾರಕ ಕಿ.ಪ್ರಾ.ಶಾಲೆ ಟಿ.ವ್ಹಿ ಸ್ಟೇಶನ್ ಹಿಂದುಗಡೆ ಕಲಬುರಗಿ** |
| 3 | **ಅನುಮತಿ ನೀಡಿದ ತರಗತಿಗಳು** | **1 ರಿಂದ 5 ನೇ ತರಗತಿಗಾಗಿ** |
| 4 | **ಪ್ರಾರಂಭಿಸಬೇಕಾದ ತರಗತಿಗಳು ಮತ್ತು ಶೈಕ್ಷಣಿಕ ವರ್ಷ** | **1 ನೇ ತರಗತಿ : 2016-17**<br>**2 ನೇ ತರಗತಿ : 2017-18**<br>**3 ನೇ ತರಗತಿ : 2018-19**<br>**4 ನೇ ತರಗತಿ : 2019-20**<br>**5 ನೇ ತರಗತಿ : 2020-21** |
| 5 | **ಅನುಮತಿ ನೀಡಿದ ಮಾಧ್ಯಮ** | **ಆಂಗ್ಲ ಮಾಧ್ಯಮ ( ಶಾಶ್ವತ ಅನುದಾನ ರಹಿತ)** |
| 6 | **ಶುಲ್ಕ ಪಾವತಿ ಮಾಡಿರುವುದು** | **ರೂ: 10,000/- + 25,000/- ಒಟ್ಟು ರೂ.35,000/- ಪಾವತಿ ಮಾಡಿರುತ್ತಾರೆ** |

ಸದರಿ ಶಿಕ್ಷಣ ಸಂಸ್ಥೆ ಕ್ರಮ ಸಂಖ್ಯೆ: **12 ರಜೀಸ್ಟ್ರ ಪುಟ ಸಂಖ್ಯೆ 03 ವ್ಯಾಲೂಮ್ ಸಂಖ್ಯೆ: 1** ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೊಂದಣಿ ವಹಿಯಲ್ಲಿ ನೊಂದಾಯಿಸಲಾಗಿದೆ. **ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟಿರುತ್ತದೆ.**

1. ಈ ನೊಂದಣಿಯು ಕರ್ನಾಟಕ ಶಿಕ್ಷಣ ಮಸೂದೆ 1983 ರಡಿ ರಚಿಸಲಾದ Karnataka Educational Institution (Classification, Regulbation and Prescription of Curricula etc) Rules 1995 ರ ಉಪನಿಯಮ3,4,5 ತಿಳಿಸಿದ ಅಂಶಗಳ ಪಾಲನೆಗೆ ಒಳಪಟ್ಟಿರುತ್ತದೆ.
2. ಗವರ್ನಿಂಗ್ ಕೌನ್ಸಿಲರವರು ಕ.ಶಿ.ಮ 1983 ರಡಿ ರಚಿಸಲಾದ ವರ್ಗಿಕರಣ ನೊಂದಣಿ ನಿಯಮ (4) ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳು ಕಡ್ಡಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠ, ಪೀಠೋಪಕರಣಗಳು, ಸಿಬ್ಬಂದಿವರ್ಗ , ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
4. ಸದರಿ ಶಿಕ್ಷಣ ಸಂಸ್ಥೆಯ ಯಾವುದೇ ಸಂದರ್ಭದಲ್ಲಿಯೂ ಇಲಾಖೆಯ ಪೂರ್ವಾನುಮತಿ ಇಲ್ಲದೇ ಹೆಚ್ಚಿನ ವಿಭಾಗಗಳನ್ನು ತೆಗೆಯುವಂತಿಲ್ಲ.
5. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು, ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ.
6. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯೂ ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
7. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು, ಕರ್ನಾಟಕ ಶಿಕ್ಷಣ ಮಸೂದೆ (1983) ಕರ್ನಾಟಕ ಆಕ್ಟ ಸಂಖ್ಯೆ:1-95 ಇದರಡಿಯಲ್ಲಿ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ಪಾಲಿಸತಕ್ಕದ್ದು.

8. ಪ್ರಾಥಮಿಕ ಶಾಲಾ ನೊಂದಣಿಗೆ ಸಂಬಂಧಿಸಿದಂತೆ ಸರಕಾರಿ ಅಧಿಸೂಚನೆ ಸಂಖ್ಯೆ: 175 ಪಿ ಎಮ ಸಿ ದಿನಾಂಕ 07-09-1998 ಮತ್ತು 29-12-1998 ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ, ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ: 20/- ಛಾಪಾ ಕಾಗದದಲ್ಲಿ ನೋಟರಿಯವರಿಂದ ಮುಂದೆ ಪ್ರಮಾಣಿಕರಿಸಿದ ಒಪ್ಪಿಗೆ ಪತ್ರದ ಆಧಾರದ ಮೇಲೆ ಅನುಮತಿ ನೀಡಲಾಗಿದೆ.
9. ಕರ್ನಾಟಕ ಶಿಕ್ಷಣ ಸಂಸ್ಥೆಗಳ ಖಾಸಗಿ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ನೌಕರರ ಸೇವಾ ಸೌಲಭ್ಯ ನಿಯಮ 2005 ರಲ್ಲಿ ವಿಧಿಸಿದ ಷರತ್ತುಗಳ ಪಾಲನೆಗೆ ಬದ್ಧರಾಗಿರತಕ್ಕದ್ದು.
10. ಇಲಾಖೆ ಹಾಗೂ ಸರ್ಕಾರದಿಂದ ನಿಗದಿಪಡಿಸಿದ ಪಠ್ಯಪುಸ್ತಕ ಪರೀಕ್ಷಾ ಕ್ರಮಗಳನ್ನು ತಪ್ಪದೇ ಪಾಲಿಸತಕ್ಕದ್ದು ಮತ್ತು ಸರ್ಕಾರ/ ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಆದೇಶ/ಸುತ್ತೋಲೆಗಳನ್ನು ಪಾಲಿಸತಕ್ಕದ್ದು.
11. ನೊಂದಣಿ ನೀಡಿದ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಶಾಲೆ ತೆರೆಯತಕ್ಕದ್ದು, ಮತ್ತು ಶಾಲೆ ಪ್ರಾರಂಭಿಸಿದ ಎರಡು (2) ತಿಂಗಳೊಳಗೆ ಪ್ರಥಮ ಮಾನ್ಯತೆಗಾಗಿ ಪ್ರಸ್ತಾವೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿ ಮಾನ್ಯತೆ ಪಡೆಯತಕ್ಕದ್ದು, ಇಲ್ಲವಾದಲ್ಲಿ ಈ ನೊಂದಣಿಯೂ ತನ್ನಷ್ಟಕ್ಕೆ ತಾನೆ ರದ್ದಾಗುತ್ತದೆ.
12. ಅನುಮತಿ ನೀಡಿದ ಪ್ರತಿಯೊಂದು ತರಗತಿಗಳಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತ 50:40:1 ರ ಅನುಪಾತದಲ್ಲಿ ಇರತಕ್ಕದ್ದು.
13. ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.
14. ಕರ್ನಾಟಕ ಶಿಕ್ಷಣ ಮಸೂದೆ ಇದರಡಿಯಲ್ಲಿ ರಚಿಸಲಾದ ನೊಂದಣಿ ನಿಯಮದಂತೆ ನೊಂದಣಿಯಾದ ಎಲ್ಲಾ ಶಾಲೆಗಳು ಸೆಕ್ಷನ್ 36-39 ರಂತೆ ರಿಕಗ್ನೇಶನ ಹಾಗೂ ಪ್ರಾವಿಜನಲ್ ರಿಕಗ್ನೇಶನ ವ್ಯಾಪ್ತಿಗೆ ಒಳಪಟ್ಟಿರುತ್ತದೆ.
15. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕಿಯ ಪರಿಕ್ಷೇಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
16. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಆಡಳಿತ ಮಂಡಳಿಯವರ ಜಂಟಿ ಖಾತೆಯಲ್ಲಿ ಇಡತಕ್ಕದ್ದು.
17. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮದಂತೆ ಪಾಲಿಸತಕ್ಕದ್ದು.
18. ಶಾಲೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಮತ್ತು ಗಂಡು ಮಕ್ಕಳಿಗೆ ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯಕ ಶೌಚಾಲಯಗಳ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸತಕ್ಕದ್ದು.
19. ಸಂಸ್ಥೆಯ ಹಣಕಾಶಿಗೆ ಸಂಬಂಧಿಸಿದಂತೆ ರೂ:5.00.000 ( ಐದು ಲಕ್ಷ) ಮೊತ್ತ ಸಂಸ್ಥೆಯ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಇಟ್ಟಿರುವ ಕುರಿತು ಅಥವಾ ಸ್ಥಿರ ಅಸ್ತಿ ಕುರಿತು ಇಲಾಖೆ ಕೇಳಿದಾಗ ದಾಖಿಲೆ ಪರಿಶೀಲನೆಗೆ ಒದಗಿಸತಕ್ಕದ್ದು.
20. ಇಲಾಖೆ ಪರೀಕ್ಷೆ ಹಾಗೂ ಇತರೇ ರಾಷ್ಟ್ರೀಯ ಕಾರ್ಯಕ್ರಮಗಳ ಕೆಲಸಗಳಿಗಾಗಿ ಶಾಲಾ ಕಟ್ಟಡ ಒದಗಿಸತಕ್ಕದ್ದು.
21. ಆರ್ ಟಿ ಇ ಆಕ್ಟನಲ್ಲಿನ ಸಂಬಂಧಿಸಿದಂತೆ ಎಲ್ಲಾ ನಿಮಗಳನ್ನು ನಿಬಂಧನೆಗಳಿಗೆ ಬದ್ಧರಾಗಿರುತಕ್ಕದ್ದು.

ಉಪನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ

ಸ್ಥಳ:- ಕಲಬುರಗಿ
ದಿನಾಂಕ: 13-04-2016

ಗೆ,

1. ಅಧ್ಯಕ್ಷರು / ಕಾರ್ಯದರ್ಶಿಗಳು: **ಶ್ರೀ ದಾಮೋದರ ರಘೋಜಿ ಪ್ರೈವೇಟ್ ಟ್ರಸ್ಟ್ ಹುಮನಾಬಾದ ರಿಂಗ ರೋಡ ಕಲಬುರಗಿ**
2. ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಲಬುರಗಿ ಉತ್ತರ ವಲಯ ಇವರಿಗೆ ಮುಂದಿನ ಕ್ರಮಕ್ಕಾಗಿ.